ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (429)277
ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ
ಉತ್ತರಿಸುವ ಸಚಿವರು : ಬಯ್ಯಾಪುರ(ಕುಷ್ಟಗಿ)
(ಶ್ರೀ ಶೋಭಾ ಕರಂದ್ಲಾಜೆ)

ಅ ಕುಷ್ಟಗಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;(ವಿವರ ನೀಡುವುದು);

ಆ ಹಾಗಿದ್ದಲ್ಲಿ, ಆ ಗ್ರಾಮಗಳು ಎಷ್ಟು;

ಕುಷ್ಟಗಿ ತಾಲ್ಲೂಕಿನ ಜನವಸತಿಗಳ ಕುಡಿಯುವ ನೀರಿನ ಜಲಮೂಲಗಳಲ್ಲಿ ಅಧಿಕ ಫ್ಲೋರೈಡ್ ಅಂಶ ಸೇರಿದಂತೆ ರಾಸಾಯನಿಕವಾಗಿ ಕಲುಷಿತಗೊಂಡಿರುವ ಜನವಸತಿಗಳ ವಿವರಗಳು ಇಂತಿವೆ.

ಫ್ಲೋರೈಡ್	ಕಬ್ಬಣಾಂಶ	ನೈಟ್ರೇಟ್	ಲವಣಾಂಶ	ಫ್ಲೋರೈಡ್ ಸಹಿತ ಇತರೆ	ಫ್ಲೋರೈಡ್ ರಹಿತ ಇತರೆ	ಒಟ್ಟು ಸಮಸ್ಯಾತ್ಮಕ ಜನವಸತಿಗಳು
2	2	0	2	140	5	151

ಇ ಈ ಸಮಸ್ಯೆಗಳನ್ನು ಸರಿಪಡಿಸಲು ಬೇರೆ ಯೋಜನೆಯನ್ನು ರೂಪಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು, ಅದು ಯಾವ ಹಂತದಲ್ಲಿದೆ;

ಈ ಈ ಯೋಜನೆಯನ್ನು ಬೇಗನೆ ಮುಗಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ರೂ.600 ಲಕ್ಷ ಅಂದಾಜಿನ 47 ಕುಡಿಯುವ ನೀರು ಸರಬರಾಜು ಯೋಜನಾ ಕಾಮಗಾರಿಗಳನ್ನು ಅನುಮೋದಿಸಿದ್ದು, ಸದರಿ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ. ಇದರಲ್ಲಿ ಮೇಲೆ ಹೇಳಲಾದ ಸಮಸ್ಯಾತ್ಮಕ ಜನವಸತಿಗಳ ಪೈಕಿ 31 ಜನವಸತಿಗಳನ್ನು ಆವರಿಸಲಾಗುವುದು. ಉಳಿದ ಜನವಸತಿಗಳಿಗಾಗಿ ಭೂಮಿಯ ಮೇಲ್ಮೈ ಜಲಮೂಲ ಮತ್ತು ಸೂಕ್ತವಿರುವ ಇತರೆ ಪರ್ಯಾಯ ಕುಡಿಯುವ ನೀರಿನ ಜಲಮೂಲ ಆಧರಿಸಿ, ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಾಧುತ್ವವಿರುವ ಶಾಶ್ವತ ಯೋಜನೆಗಳನ್ನು ಸಬ್-ಮಿಷನ್ ಕಾರ್ಯಕ್ರಮದಡಿ ರೂಪಿಸಲು ಕ್ರಮವಹಿಸಲಾಗುತ್ತಿದೆ.